# ಜಗತ್ತಿನ ಪ್ರಥಮ ಮಹಿಳಾ ವಿಶ್ವವಿದ್ಯಾಲಯ

**ತಮಿಳುನಾಡಿನ ವೇಡಾಲ್‌ನಲ್ಲಿ ದೊರೆತಿರುವ ಶಾಸನ ವಿಶ್ವದ ಮೊದಲ ಮಹಿಳಾ ವಿಶ್ವವಿದ್ಯಾನಿಲಯದ ವಿಷಯವನ್ನೂ ಅದರ ಸ್ವರೂಪವನ್ನೂ ತಿಳಿಸುತ್ತದೆ.**

ಪುರಂಜೀವಿ ಅವರು 'ವಿಶ್ವವಿದ್ಯಾಲಯ' ಶೀರ್ಷಿಕೆಯಡಿ (ಅ. 28) ತಮ್ಮ ವಿಚಾರಲಹರಿಯನ್ನು ತೇಲಿಬಿಟ್ಟಿದ್ದಾರೆ. ಅದು ತಕ್ಷಶಿಲಾ ಹಾಗೂ ನಾಲಂದ ವಿಶ್ವವಿದ್ಯಾಲಯಗಳ ಬಗೆಗಿನ ಮಾಹಿತಿಪೂರ್ಣ ಬರಹವಾಗಿದೆ. ವಿಶೇಷವಾಗಿ ನನ್ನಂಥ ಸಂಶೋಧನೆ ಮತ್ತು ಶಿಕ್ಷಣಪ್ರೇಮಿಗಳಿಗಲ್ಲದೆ, ಎಲ್ಲ ಓದುಗರಿಗೂ ಆ ಲೇಖನ ಸಂತೋಷ ಕೊಡುತ್ತದೆ. ಆ ಬರಹವನ್ನು ಓದಿದೊಡನೆ ನನ್ನ ನೆನಪಲ್ಲಿ ಉಳಿದಿದ್ದ ಸ್ತ್ರೀವಿದ್ಯಾಭ್ಯಾಸವನ್ನು ಕುರಿತಾದ ಒಂದು ಪ್ರಾಚೀನ ವಿಶ್ವವಿದ್ಯಾಲಯ ನೆನಪಿಗೆ ಬಂದಿತು. ಸ್ತ್ರೀವಿದ್ಯಾಭ್ಯಾಸವನ್ನು ಕುರಿತ ಚಿಂತನ–ಮಂಥನಗಳು, ಸಂವಾದಗಳು ಇಂದೂ ನಡೆಯುತ್ತಲೇ ಇವೆ. ಇಪ್ಪತ್ತೊಂದನೆಯ ಶತಮಾನಕ್ಕೆ ಕಾಲಿಟ್ಟ ಇಂದಿನ ಸಂದರ್ಭದಲ್ಲಿಯೂ ವಿದ್ಯೆ ಕಲಿಯದ, ಶಿಕ್ಷಣ ದೊರೆಯದ ದಾರುಣ ವ್ಯವಸ್ಥೆಯಲ್ಲಿ ಹೆಣ್ಣುಮಕ್ಕಳು ಗಿರಕಿ ಹೊಡೆಯುತ್ತಿದ್ದಾರೆ. ಗಂಡು–ಹೆಣ್ಣು ಎಲ್ಲರಾದಿಯಾಗಿ ವಿದ್ಯಾವಂತರಾಗಬೇಕೆಂಬ ಸದುದ್ದೇಶದಿಂದ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಶಿಕ್ಷಣ ಕಲಿಕೆಗೆ ಅನೇಕ ಸುಧಾರಣೆಗಳನ್ನು ತಂದು ಅವುಗಳ ಅನುಷ್ಠಾನಕ್ಕೆ ಪ್ರಯತ್ನಿಸುತ್ತಿವೆ. ಆದರೂ ಗ್ರಾಮೀಣ ಪ್ರದೇಶದ ರೈತಾಪಿ ಮಕ್ಕಳಿಗೆ, ಬಡತನದ ರೇಖೆಗಿಂತಲೂ ಕೆಳಗಿರುವ ಕೂಸುಕಂದಮ್ಮಗಳಿಗೆ ಓದು–ಬರಹ ಗಗನಕುಸುಮವಾಗಿರುವ ಅರ್ಧಸತ್ಯವನ್ನು ಒಪ್ಪಿಕೊಳ್ಳಲೇಬೇಕು.

ದೊಡ್ಡ ದೊಡ್ಡ ಪಟ್ಟಣಗಳ ದುರಂತ ಕಥೆ ಮತ್ತೊಂದು ರೀತಿಯದು. ಅಲ್ಲಿನ ಕೊಳಚೆ ಪ್ರದೇಶಗಳಲ್ಲಿ ವಾಸಿಸುವ ಮಕ್ಕಳು, ಕೂಲಿ ಕಾರ್ಮಿಕರ ಕೂಸುಗಳು, ಮನೆಕಟ್ಟುವ ಕೆಲಸಗಾರರ ಹಸುಳೆಗಳು, ಹೋಟೆಲು ಹಾಗೂ ಇತರ ಉದ್ದಿಮೆಗಳಲ್ಲಿ ದುಡಿಯುತ್ತಿರುವ ಬಾಲ ಕಾರ್ಮಿಕರು – ಹೀಗೆ ಸಮಾಜದ ಅನೇಕ ಬಡ ಕುಟುಂಬದ ಮಕ್ಕಳಿಗೆ ವಿದ್ಯೆ ಈಗಲೂ ಎಟುಕದ ವಿಷಯವಾಗಿದೆ.

ನಮ್ಮ ದೇಶದ ಸರ್ವಾಂಗೀಣ ಪ್ರಗತಿಗೆ ತೊಡಕಾಗಿರುವ ಕೆಲವು ಸಮಸ್ಯೆಗಳಲ್ಲಿ ಒಂದು ವಿದ್ಯಾಭ್ಯಾಸ ಪಡೆಯಲು ಇರುವ ಅಡಚಣೆಗಳು. ಶತ ಶತಮಾನಗಳಿಂದಲೂ ವಿದ್ಯೆ ಎಲ್ಲರಿಗೂ ದಕ್ಕದೆ ಅಸಮಾನತೆಯಿಂದಾಗಿ ದೇಶ ಅಧೋಗತಿಗೆ ಇಳಿದಿತ್ತು. ಆದರೆ ಹಿಂದಿನ ಸಂಕುಚಿತತೆ ಇಂದು ಇಲ್ಲ. ಶಿಕ್ಷಣ ಎಲ್ಲರಿಗೂ ದೊರೆಯಬೇಕು, ಎಲ್ಲರೂ ವಿದ್ಯಾವಂತರಾಗಬೇಕು ಎಂಬ ಆರೋಗ್ಯಕರ ನಿಲುವು




■ ಪ್ರೊ. ಕಮಲಾ ಹಂಪನಾ

ಹಾಗೂ ಪ್ರಗತಿಪರ ಧೋರಣೆ ವ್ಯಕ್ತವಾಗಿದೆ. ಮುಖ್ಯವಾಗಿ ಶಿಕ್ಷಣದಲ್ಲಿ ಮಹಿಳೆಗೆ ಸಮಾನ ಅವಕಾಶ ಕಲ್ಪಿತವಾಗಿರುವುದು ಸ್ವಾಗತಾರ್ಹ.

ಸ್ತ್ರೀ ವಿದ್ಯಾಭ್ಯಾಸ ಮತ್ತು ಶಿಕ್ಷಣಕ್ಕೆ ಸಂಬಂಧಿಸಿದಂತೆ ಪ್ರಾಚೀನ ತಮಿಳು ಶಾಸನವೊಂದರ ವಿಷಯ ಮತ್ತು ಮಾಹಿತಿ ನೆನಪಿಗೆ ಬಂದು ನನ್ನ ಕುತೂಹಲವನ್ನು ರೋಮಾಂಚನಗೊಳಿಸಿತು. ಒಂದು ಸಾವಿರದ ಇನ್ನೂರು ವರ್ಷಗಳಷ್ಟು ಹಿಂದೆ ಮಹಿಳೆಯ ಶಿಕ್ಷಣಕ್ಕೆ ದೊರೆತಿದ್ದ ಪ್ರಾಶಸ್ತ್ಯ ಕಂಡು ಏಕಕಾಲದಲ್ಲಿ ನನಗೆ ಆನಂದ ಮತ್ತು ಆಶ್ಚರ್ಯ ಉಂಟಾದವು.

ತಮಿಳುನಾಡಿನ ಉತ್ತರ ಆರ್ಕಾಟು ಜಿಲ್ಲೆಯ ವಂದಿವಾಶ್ ತಾಲೂಕಿನ ವೇಡಾಲ್ ಎನ್ನುವ ಪಳ್ಳಿಯಲ್ಲಿ ದೊರೆತಿರುವ ಪುರಾತನ ಶಾಸನವದು. ಅದರ ಕಾಲ ಕ್ರಿ.ಶ. 885 (ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್, ಸಂಪುಟ 3, ಕ್ರಿ.ಶ. 885, ವೇಡಲ್, ತಮಿಳುನಾಡು). ತಮಿಳು ಭಾಷೆಯಲ್ಲಿರುವ ಆ ಶಾಸನದ ಇಂಗ್ಲಿಷ್ ಭಾಷಾಂತರ ಓದಿ ಚಕಿತಗೊಂಡೆ. ಅದು ಪುರಾತನ ಕಾಲದಲ್ಲಿದ್ದ ಮಹಿಳಾ ವಿಶ್ವವಿದ್ಯಾನಿಲಯದ ವಿಷಯವನ್ನೂ ಅದರ ಸ್ವರೂಪವನ್ನೂ ತಿಳಿಸುತ್ತದೆ. ಅದೇ ಜಗತ್ತಿನ ಮೊತ್ತಮೊದಲನೆಯ ಮಹಿಳಾ ವಿಶ್ವವಿದ್ಯಾಲಯ ಆಗಿತ್ತೆಂಬುದು ಹೆಮ್ಮೆಪಡುವ ಹೆಗ್ಗಳಿಕೆಯ ವಿಷಯ. ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕೆಂದೇ ತೆರೆದಿದ್ದ ಆ ವಿಶ್ವವಿದ್ಯಾಲಯ ಜ್ಞಾನದ ಅನೇಕ ವಿಷಯಗಳನ್ನು ವಿದ್ಯಾರ್ಥಿನಿಯರಿಗೆ ಬೋಧಿಸುತ್ತಿತ್ತು. ಅದರ ಜೊತೆಗೆ ಜೈನ ಸನ್ಯಾಸಿನಿಯರಿಗೆ ಅಗತ್ಯವಾದ ಆಧ್ಯಾತ್ಮಿಕ ಹಾಗೂ ಆಗಮಿಕ ವಿಷಯಗಳನ್ನು ಕಲಿಸಿ ಪದವಿಗಳನ್ನು ನೀಡುತ್ತಿತ್ತು. ಆ ಮಹಿಳಾ ವಿಶ್ವವಿದ್ಯಾಲಯದಲ್ಲಿ ಒಂಬೈನೂರು ವಿದ್ಯಾರ್ಥಿನಿಯರಿದ್ದರು. ಕನಕವೀರ ಕುರತ್ತಿಯಾರರು (ಕುರತ್ತಿ= ಗುರುಸ್ತ್ರೀ) ಆಚಾರ್ಯಿಣಿಯಾಗಿದ್ದರು, ಅಂದರೆ ಅವರದು ಇಂದಿನ ವಿಶ್ವವಿದ್ಯಾಲಯಗಳ ಕುಲಪತಿಗೆ ಸಮಾನ ಸ್ಥಾನ.

ಆ ವಿಶ್ವವಿದ್ಯಾನಿಲಯದಲ್ಲಿ ಒಮ್ಮೆ ಒಂದು ಬಹು ಸ್ವಾರಸ್ಯಕರವಾದ ಪ್ರಸಂಗ ನಡೆಯಿತು. ಅಲ್ಲಿ ವ್ಯಾಸಂಗ ಮಾಡುತ್ತಿದ್ದ ವಿದ್ಯಾರ್ಥಿನಿಯರಲ್ಲಿ ತೀವ್ರತರ ಭಿನ್ನಾಭಿಪ್ರಾಯದಿಂದ ವಿರಸ ಉಂಟಾಯಿತು. ಒಂಬೈನೂರು ವಿದ್ಯಾರ್ಥಿನಿಯರಲ್ಲಿ ಎರಡು ಗುಂಪುಗಳಾದುವು. ಒಂದು, ಆರುನೂರು ವಿದ್ಯಾರ್ಥಿನಿಯರ ಗುಂಪು, ಇನ್ನೊಂದು ಐನೂರು ವಿದ್ಯಾರ್ಥಿನಿಯರ ತಂಡ. ವಿರಸದ ಹೊಗೆ ಕಾಣುತ್ತಿದ್ದಂತೆಯೇ ಅದು ಉಲ್ಬಣಿಸಲು ಬಿಡದೆ ಕುಲಪತಿ ಕನಕವೀರ ಕುರತ್ತಿಯಾರರು ಮುಂದೆನಿಂತು ಶಾಂತಿಯುತವಾಗಿ ಸಮಸ್ಯೆಯನ್ನು ಬಗೆಹರಿಸಿದರು.

ಮಹಿಳಾ ವಿಶ್ವವಿದ್ಯಾಲಯದ ಆಚಾರ್ಯಿಣಿ ಕನಕವೀರ ಕುರತ್ತಿಯಾರರಿಗೆ ಅರಣ್ಡೆ ಮಂಗಲಂ ಎನ್ನುವ ಮತ್ತೊಂದು ಹೆಸರೂ ಇತ್ತು. ಆಕೆ ಅಂದಿನ ಪ್ರಸಿದ್ಧ ಯತಿವರೇಣ್ಯರಾಗಿದ್ದ ಗುಣಕೀರ್ತಿ ಭಟ್ಟಾರಕರ ಶಿಷ್ಯೆಯಾಗಿದ್ದರೆಂದು ಶಾಸನ ನಮೂದಿಸಿದೆ. ಇದಿಷ್ಟೂ ಶಾಸನದಿಂದ ತಿಳಿದುಬರುವ ಸಂಗತಿ.

ಕನ್ನಡ ನಾಡಿನಲ್ಲಿ ಒಂದು ಪ್ರತ್ಯೇಕ ಮಹಿಳಾ ವಿಶ್ವವಿದ್ಯಾಲಯ ಬೇಕೆಂದು ಹೋರಾಡಿ ಪಡೆಯಬೇಕಾಯಿತು. ಸ್ತ್ರೀ ಶಿಕ್ಷಣದ ಮಹತ್ವ, ಮಹಿಳಾ ವಿಶ್ವವಿದ್ಯಾಲಯದ ಅಗತ್ಯ – ಇವೆಲ್ಲದರ ನಮ್ಮ ನಿರಂತರ ಹೋರಾಟದ ಫಲಶ್ರುತಿಯಾಗಿ ಬಿಜಾಪುರದಲ್ಲಿ ಕರ್ನಾಟಕ ಸರ್ಕಾರ ಮಹಿಳಾ ವಿಶ್ವವಿದ್ಯಾಲಯವನ್ನು ಪ್ರಾರಂಭಿಸಿತು.

ಮಹಿಳೆಗೆ ದಕ್ಕಬೇಕಾದ ಅನೇಕ ಮಹತ್ವದ ಸ್ಥಾನಗಳಿಗಾಗಿ ಇಂದೂ ಹೋರಾಟ ನಡೆಯುತ್ತಲೇ ಇದೆ. ಸಂಸತ್ತಿನಲ್ಲಿ ಶೇಕಡಾ ಮೂವತ್ತಮೂರು ಮಹಿಳಾ ಪ್ರಾತಿನಿಧ್ಯ ಇರಬೇಕೆಂದು ಮೀಸಲಾತಿಗಾಗಿ ಬಡಿದಾಡಬೇಕಾಗಿರುವ ಇಂದಿನ ಸಾಮಾಜಿಕ–ರಾಜಕೀಯ ವ್ಯವಸ್ಥೆಯ ಸಂಘರ್ಷದಲ್ಲಿ ನಿಂತು ಹಿಂತಿರುಗಿ ನೋಡಿದಾಗ, ಒಂಬತ್ತನೆಯ ಶತಮಾನದ ಆ ಮಹಿಳಾ ವಿಶ್ವವಿದ್ಯಾಲಯ ಎಂಥ ದೊಡ್ಡ ಪ್ರಗತಿಪರ ಸಾಧನೆ ಎನಿಸುತ್ತದೆ.

ಪ್ರತಿಕ್ರಿಯಿಸಿ: feedback@sudha.co.in